# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 424 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15.09.2022. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಬಿದರಕೋಟೆ ಗ್ರಾಮ ಪಂಚಾಯಿತಿಯಲ್ಲಿ ಖಾಯಂ ಪಿ.ಡಿ.ಓ ಮತ್ತು ಕಾರ್ಯದರ್ಶಿಗಳ ಎರಡೂ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| (ಆ) | ಸದರಿ ಹುದ್ದೆಗಳು ಖಾಲಿ ಇರಲು ಕಾರಣವೇನು: (ಮಾಹಿತಿ ನೀಡುವುದು) | ಬಿದರಕೋಟೆ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಮಂಜುನಾಥ್ ಇವರನ್ನು ತುಮಕೂರು ಜಿಲ್ಲೆಗೆ ನಿಯೋಜನೆ ಮಾಡಲಾಗಿರುತ್ತದೆ.<br>ಬಿದರಕೋಟೆ ಗ್ರಾಮ ಪಂಚಾಯತಿಯ ಗ್ರೇಡ್-1 ಗ್ರಾಮ ಪಂಚಾಯತಿ ಕಾರ್ಯದರ್ಶಿಯಾದ ಶ್ರೀ ಸಜ್ಜಣ್ಣ ಸಜ್ಜನ ಇವರನ್ನು ಕಲಬುರಗಿ ಜಿಲ್ಲೆಗೆ ಅಂತರ್ ಜಿಲ್ಲಾ ವರ್ಗಾವಣೆ ಮಾಡಲಾಗಿರುತ್ತದೆ.<br>ಆದ್ದರಿಂದ ಬಿದರಕೋಟೆ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಹುದ್ದೆಗಳು ಖಾಲಿ ಇರುತ್ತವೆ. |
| (ಇ) | ಸದರಿ ಪಂಚಾಯಿತಿಯಲ್ಲಿನ ಮೂಲ ಹುದ್ದೆಗಳ ಲೀನ್ ಎಲ್ಲಿದೆ: ಹಾಗೂ ಯಾರ ಹೆಸರಿನಲ್ಲಿದೆ: ಅವರು ಪ್ರಸ್ತುತ ಎಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ:(ಮಾಹಿತಿ ಒದಗಿಸುವುದು) | ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯ ಲೀನ್ ಶ್ರೀ ಮಂಜುನಾಥ್ ರವರ ಹೆಸರಿನಲ್ಲಿ ಇದೆ.<br>ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಹುದ್ದೆಯು ಖಾಲಿ ಇರುತ್ತದೆ. |
| (ಈ) | ಮೂಲ ಹುದ್ದೆಗಳ ಅಧಿಕಾರಿ/ ನೌಕರರನ್ನು ಅನ್ಯ ಕರ್ತವ್ಯದ ಮೇಲೆ ಬೇರೆಕಡೆ ನಿಯೋಜಿಸಿರುವುದರಿಂದ ಈ ಪಂಚಾಯಿತಿಯ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಮಾಹಿತಿ ನೀಡುವುದು) | ಬಂದಿಲ್ಲ. |

2270

| | | |
|---|---|---|
| (ಉ) | ಇತರೆ ಗ್ರಾಮ ಪಂಚಾಯಿತಿಯ ಪಿ.ಡಿ.ಓ, ಮತ್ತು ಕಾರ್ಯದರ್ಶಿಗಳನ್ನು ನಿಯೋಜಿಸಿರುವುದರಿಂದ ಸರಿಯಾದ ಸಮಯದಲ್ಲಿ ಕಛೇರಿ ಕೆಲಸಗಳನ್ನು ನಿರ್ವಹಿಸದಿರುವುದು ಸರ್ಕಾರದದ ಗಮನಕ್ಕೆ ಬಂದಿದೆಯೇ: | ಬಂದಿಲ್ಲ. |
| (ಊ) | ಈ ಪಿ.ಡಿ.ಓ ಮತ್ತು ಕಾರ್ಯದರ್ಶಿಗಳು ಸರಿಯಾಗಿ ಕಛೇರಿಗೆ ಹಾಜರಾಗದಿರುವುದರಿಂದ ಬಿದರಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿಲ್ಲ.<br><br>ಆದಾಗ್ಯೂ ಸಾರ್ವಜನಿಕ ಮತ್ತು ಆಡಳಿತಾತ್ಮಕ ಕೆಲಸ ಕಾರ್ಯಗಳಿಗೆ ಅಡಚಣೆಯಾಗದಂತೆ ಮದ್ದೂರು ತಾಲ್ಲೂಕು ಬಿದರಕೋಟೆ ಗ್ರಾಮ ಪಂಚಾಯಿತಿ ಹೆಚ್ಚುವರಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಶ್ರೀಮತಿ ಎಂ.ಎಲ್.ಸುಮಲತಾ ರವರು ಹಾಗೂ ಪ್ರಭಾರ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಶ್ರೀಮತಿ ಸಿ.ಸುಮಾವತಿರವರಿಗೆ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ. |
| (ಋ) | ಬಂದಿದ್ದಲ್ಲಿ, ಬಿದರಕೋಟೆ ಗ್ರಾಮ ಪಂಚಾಯಿತಿಗೆ ಖಾಯಂ ಪಿ.ಡಿ.ಓ ಮತ್ತು ಕಾರ್ಯದರ್ಶಿ ಹುದ್ದೆಗಳಿಗೆ ಎಷ್ಟು ದಿನಗಳೊಳಗಾಗಿ ನೇಮಿಸಲಾಗುವುದು? (ಮಾಹಿತಿ ನೀಡುವುದು). | ಬಿದರಕೋಟೆ ಗ್ರಾಮ ಪಂಚಾಯತಿಯ ಖಾಯಂ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ತುಮಕೂರು ಜಿಲ್ಲೆಗೆ ನಿಯೋಜನೆ ಮಾಡಿರುವುದನ್ನು ರದ್ದುಪಡಿಸಿ ಬಿದರಕೋಟೆ ಗ್ರಾಮ ಪಂಚಾಯತಿಗೆ ನೇಮಿಸಲು ಹಾಗೂ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ಹುದ್ದೆಗೆ ನಿಯಮಾನುಸಾರ ಬಡ್ತಿ ನೀಡುವ ಸಂದರ್ಭದಲ್ಲಿ ನೇಮಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಗ್ರಾಅಪ 272 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ